ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ ★ ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

'ಉತ್ಕೃಷ್ಟತಾ ಅಂತಃಸಾಮರ್ಥ್ಯ ಉಳ್ಳ' ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

ಊಟಿರಸ್ತೆ, ಮೈಸೂರು-570 025, ಕರ್ನಾಟಕ

JSS COLLEGE OF ARTS, COMMERCE & SCIENCE OOTY ROAD, MYSORE

1916 H.H. Jagadguru 2016 Dr. Sri Shivarathri Rajendra Mahaswamiji Centenary Celebrations

☎ 0821-2548236 & 2548380 Fax: 0821-2548238 E-mail: jssautonomous@gmail.com

ದಿನಾಂಕ: **28.09.2016**

ಪ್ರಕಟಣೆಯ ಕೃಪೆಗಾಗಿ

## ಜೀವನ ಮೌಲ್ಯಗಳ ಗಣಿ ಕಗ್ಗ

– ಶ್ರೀ ಜಿ.ಎಸ್. ನಟೇಶ್

ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಕಾಲೇಜಿನ ಸುವರ್ಣ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಮಾಲೆಯ ಹನ್ನೊಂದನೆಯ ಉಪನ್ಯಾಸವಾಗಿ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ವತಿಯಿಂದ ಶಿವಮೊಗ್ಗದ ಕಸ್ತೂರಬಾ ಬಾಲಕಿಯರ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಾದ ಶ್ರೀ ಜಿ.ಎಸ್. ನಟೇಶ್ ಅವರು 'ಮಂಕುತಿಮ್ಮನ ಕಗ್ಗ–ಜೀವನ ಮೌಲ್ಯಗಳು' ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು. ಅವರು "ಮಂಕುತಿಮ್ಮನ ಕಗ್ಗ ಡಿವಿಜಿಯವರ ಜೀವನಾನುಭವದ ಸಾರವಾಗಿದೆ. ಅವರ ಅಸೀಮ ಪಾಂಡಿತ್ಯಕ್ಕೆ ಇದು ಸಾಕ್ಷಿಯಾಗಿದೆ. ಡಿವಿಜಿಯವರು ಆದರ್ಶಗಳನ್ನು ಪಾಲಿಸುತ್ತಾ ನುಡಿದಂತೆ ನಡೆದವರು. ಜೀವನ ಮೌಲ್ಯಗಳ ಪ್ರತಿಪಾದಕರು. ಅವರು ಮೌಲ್ಯಗಳ ಹಾದಿಯನ್ನು ಅರಸುತ್ತಾ ಹೋಗಿ ಉಪನಿಷತ್ತು, ಭಗವದ್ಗೀತೆಗಳ ಅಧ್ಯಯನ ಫಲವನ್ನು ಸರಳವಾಗಿ ಮತ್ತು ಆಕರ್ಷಕವಾಗಿ ಓದುಗರಿಗೆ ಪಡಿಮೂಡಿಸಿದ್ದಾರೆ. ವಿಶ್ವರಹಸ್ಯವನ್ನು ಅರಿತು ನಗುನಗುತ್ತಾ ಬಾಳಬೇಕೆಂಬುದೇ ಇದರ ತಿರುಳು. ಪ್ರತಿಯೊಬ್ಬನಲ್ಲಿಯೂ ಇರುವ ಅಂತಃಶಕ್ತಿಯನ್ನು ಅರಿತು ಅದರ ವಿಕಾಸವನ್ನು ಸಾಧಿಸುವುದೇ ಬದುಕಿನ ಗುರಿ ಎಂಬುದನ್ನು ಕಗ್ಗ ತಿಳಿಸುತ್ತದೆ" ಎಂದು ಹೇಳಿ ಕಗ್ಗದ ಹಲವು ನುಡಿಮುತ್ತುಗಳನ್ನು ರಾಗವಾಗಿ ಹಾಡಿ ಅದರ ಅರ್ಥಸ್ವಾರಸ್ಯವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ಮುಂದುವರೆದು "ವಿದ್ಯಾರ್ಥಿಗಳು ಸಣ್ಣ ಕೆಲಸವನ್ನು ಶ್ರದ್ಧೆಯಿಂದ ಮಾಡುವ ಗುಣ, ವಿವೇಕ, ಆತ್ಮಪ್ರಜ್ಞೆ, ವಿನಯ, ಕಷ್ಟಗಳನ್ನು ಎದುರಿಸುವ ಮನೋಧರ್ಮ, ಸತತ ಪ್ರಯತ್ನ ಇವುಗಳನ್ನು ಅಳವಡಿಸಿಕೊಂಡು ಬೆಳೆಯಬೇಕು. ಇದನ್ನೇ ಕಗ್ಗ ತಿಳಿಸುತ್ತದೆ" ಎಂದು ತಿಳಿಸಿದರು.

ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಮಾತನಾಡುತ್ತಾ, "ಡಿವಿಜಿ ಅವರು ನಾಲ್ಕು ಸಾಲಿನ ಚಿಕ್ಕ ಪದ್ಯಗಳಲ್ಲಿ ತತ್ವ ಸಿದ್ಧಾಂತಗಳೊಂದಿಗೆ ಜೀವನದ ಮೌಲ್ಯಗಳನ್ನು ಕಟ್ಟಿಕೊಟ್ಟಿದ್ದಾರೆ. ಅವರ ನುಡಿಮುತ್ತುಗಳು ರೂಪದ ದೃಷ್ಟಿಯಿಂದ ವಾಮನ ರೂಪದಲ್ಲಿದ್ದರೂ ಅರ್ಥದ ದೃಷ್ಟಿಯಿಂದ ತ್ರಿವಿಕ್ರಮನಂತೆ ಬೆಳೆದಿವೆ. ಸುಮಾರು ಒಂದು ಸಾವಿರ ಚೌಪದಿಗಳಿಂದ ಕೂಡಿರುವ ಈ ಕೃತಿಯಲ್ಲಿ ಹೇಳದಿರುವ ವಿಷಯಗಳೇ ಇಲ್ಲ ಎನ್ನಬಹುದು. ನಮ್ಮ ಇಂದಿನ ಧಾವಂತ ಜೀವನದಲ್ಲಿ ಇದರ ಮಹತ್ವ ಬಹಳವಾಗಿ ತೋರಿಬರುತ್ತದೆ. ಇಲ್ಲಿ ಪ್ರತಿಪಾದಿತವಾಗಿರುವ ಜೀವನ ಮೌಲ್ಯಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಜೀವನದಲ್ಲಿ ಬರುವ ಸುಖ ದುಃಖಗಳನ್ನು ಸಮಾನವಾಗಿ ಹೇಗೆ ಸ್ವೀಕರಿಸಬೇಕೆಂಬುದನ್ನು ಕಗ್ಗವು ಚೆನ್ನಾಗಿ ತಿಳಿಸುತ್ತದೆ. 'ನಗು ನಗುತಾ ಬಾಳಿ, ತೆರಳು' ಎಂಬುದೇ ಕಗ್ಗದ ಮುಖ್ಯ ಆಶಯ" ಎಂದು ತಿಳಿಸಿದರು.

ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್. ಸೋಮಶೇಖರ ಅವರು ಸ್ವಾಗತಿಸಿದರು. ಉಪನ್ಯಾಸಕರಾದ ಶ್ರೀ ಪಿ.ಎಸ್. ಮಂಜುನಾಥ್ ವಂದಿಸಿದರು. ಡಾ. ಎಚ್.ಟಿ. ಶೈಲಜ ಅವರು ನಿರೂಪಿಸಿದರು. ಕುಮಾರಿ ಶೃತಿ ಪ್ರಾರ್ಥಿಸಿದರು. ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಂ. ಮಹದೇವಪ್ಪನವರು ಮತ್ತು ಸುವರ್ಣ ಮಹೋತ್ಸವ ಸಮಿತಿಯ ಸಂಘಟನಾ ಕಾರ್ಯದರ್ಶಿಗಳಾದ ಪ್ರೊ.ಡಿ.ಎಸ್. ಸದಾಶಿವಮೂರ್ತಿಯವರು ಉಪಸ್ಥಿತರಿದ್ದರು.

ಗೆ,

ಸಂಪಾದಕರು

______________________

______________________

ಪ್ರಾಂಶುಪಾಲರು

ಪ್ರಾಂಶುಪಾಲರು

ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

ಊಟಿ ರಸ್ತೆ, ಮೈಸೂರು-25